# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು-572 103

ಸಂಖ್ಯೆ:ತುವಿ:ಅವಿ:4391/2025-26/3584 ದಿನಾಂಕ:20.02.2026

## :ಸುತ್ತೋಲೆ:

ವಿಷಯ: ತುಮಕೂರು ವಿಶ್ವವಿದ್ಯಾನಿಲಯದ ಆಡಳಿತದಲ್ಲಿ ಕನ್ನಡ ಭಾಷೆಯ ಅನುಷ್ಠಾನ ಕುರಿತು.

ಉಲ್ಲೇಖ:
1. ಆಪ್ತ ಕಾರ್ಯದರ್ಶಿಗಳು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು ಇವರ ಪತ್ರದ ಸಂಖ್ಯೆ: ಕಪ್ರಾ/ಅ/ಆಕಾ/356/2025 ದಿನಾಂಕ:18.12.2025.
2. ಆಪ್ತ ಕಾರ್ಯದರ್ಶಿಗಳು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು ಇವರ ಪತ್ರದ ಸಂಖ್ಯೆ: ಕಪ್ರಾ/ಅ/ಆಕಾ/395/2026 ದಿನಾಂಕ:06.01.2026.
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:14.01.2026(ಕಂಡಿಕೆ-213)
4. ವಿವಿ ಆದೇಶ ಸಂಖ್ಯೆ : ತುವಿ.ಸಿಬ್ಬಂದಿ:2419(ಭಾಗ-2)/2025-26/3317 ದಿನಾಂಕ 28.01.2026

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(01)ರ ಪತ್ರದಲ್ಲಿ ತಿಳಿಸಿರುವಂತೆ, ದಿನಾಂಕ:02.01.2026 ಶುಕ್ರವಾರ ಮಧ್ಯಾಹ್ನ 02.30 ಗಂಟೆಗೆ ವಿಶ್ವವಿದ್ಯಾನಿಲಯದಲ್ಲಿ ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು, ಇವರ ಅಧ್ಯಕ್ಷತೆಯಲ್ಲಿ ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನೆ ಸಭೆಯನ್ನು ಕೈಗೊಳ್ಳಲಾಗಿದ್ದು, ಉಲ್ಲೇಖ (02)ರಲ್ಲಿ ಸಭಾ ನಡವಳಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ, ಸದರಿ ಸಭೆಯಲ್ಲಿ ಚರ್ಚಿಸಲಾದ ವಿಷಯಗಳನ್ವಯ ಈ ಕೆಳಗಿನಂತೆ ಸಲಹೆ ಮತ್ತು ಸೂಚನೆಗಳನ್ನು ನೀಡಿ, ಅವುಗಳನ್ನು ಕಾಲಮಿತಿಯಲ್ಲಿ ಕಾರ್ಯರೂಪಕ್ಕೆ ತರುವಂತೆ ನಿರ್ಣಯ ತೆಗೆದುಕೊಳ್ಳಲಾಗಿರುತ್ತದೆ. ಈ ಕೆಳಕಂಡ ವಿಷಯಗಳನ್ನು ಗಂಭೀರವಾಗಿ ಪರಿಗಣಿಸಿ ಅನುಷ್ಠಾನಗೊಳಿಸಲು ಅಗತ್ಯ ಕ್ರಮವಹಿಸುವಂತೆ ತಿಳಿಸಿದ್ದು, ಸದರಿ ನಿರ್ಣಯದಂತೆ ಕ್ರಮವಹಿಸಲು ಉಲ್ಲೇಖ(03) ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಈ ಮೂಲಕ ತಿಳಿಸಲಾಗಿದೆ.

1. ವಿಶ್ವವಿದ್ಯಾನಿಲಯದ ಆವರಣಗಳಲ್ಲಿನ ಎಲ್ಲಾ ಕಚೇರಿಗಳಲ್ಲಿ, ಕಾಲೇಜುಗಳಲ್ಲಿ ಮತ್ತು ಸ್ನಾತಕೋತ್ತರ ವಿಭಾಗಗಳಲ್ಲಿ ಹೆಸರು, ಪದನಾಮ, ಸೇವಾವಧಿಯ ನಾಮಫಲಕಗಳು, ಮಾರ್ಗಗಳ ಸೂಚನಾ ಫಲಕಗಳು ಹಾಗೂ ಇನ್ನಿತರೆ ಯಾವುದೇ ನಾಮಫಲಕಗಳನ್ನು ಕಡ್ಡಾಯವಾಗಿ ಕನ್ನಡದಲ್ಲಿಯೇ ಪ್ರದರ್ಶಿಸುವ ಸಂಬಂಧ ಅಗತ್ಯ ಕ್ರಮವಹಿಸುವುದು.
2. ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ, ಜಾಹಿರಾತುಗಳಲ್ಲಿ, ಕಾರ್ಯಕ್ರಮದ ನಾಮ ಫಲಕಗಳಲ್ಲಿ, ಇತರೆ ನಾಮಫಲಕಗಳಲ್ಲಿ, ದಾಖಲಾತಿ ನಮೂನೆಗಳಲ್ಲಿ, ಕಡತಗಳು ಮಂಡಿಸುವಲ್ಲಿ ಮತ್ತು ಪತ್ರವ್ಯವಹಾರಗಳ ಇತ್ಯಾದಿ ಸಂವಹನ ಪ್ರಕ್ರಿಯೇಗಳಲ್ಲಿ ಕಡ್ಡಾಯವಾಗಿ ಕನ್ನಡ ಅನುಷ್ಠಾನಗೊಳಿಸುವುದು.
3. ಪ್ರಾಧ್ಯಾಪಕರು ತಾವು ಯಾವ ಕ್ಷೇತ್ರದಲ್ಲಿ ಪಾಠ ಮಾಡುತ್ತಾರೋ ಆ ಕುರಿತಂತೆ ಕನ್ನಡದಲ್ಲಿ ಪುಸ್ತಕ ಬರೆದು ಮುದ್ರಣಕ್ಕೆ ಕ್ರಮ ವಹಿಸುವುದು.
4. ವಿವಿಧ ವಿಷಯಗಳ ಪಿ.ಹೆಚ್‌ಡಿ ಸಾರಲೇಖನಗಳು ಕನ್ನಡದಲ್ಲಿಯೂ ಇರುವಂತೆ ಕ್ರಮವಹಿಸುವುದು.
5. ಸಂವಿಧಾನ ಕುರಿತಂತೆ ಸರಳವಾಗಿ ಮಾಹಿತಿ ನೀಡುವ ಪುಸ್ತಕಗಳನ್ನು ಕನ್ನಡದಲ್ಲಿ ಪ್ರಕಟಿಸಿ, ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಅನುಕೂಲ ಮಾಡಲು ಕ್ರಮವಹಿಸುವುದು.
6. ವಿಶ್ವವಿದ್ಯಾನಿಲಯದ ಪ್ರತಿ ಅಧ್ಯಾಪಕರು ತಮ್ಮ ಪರಿಣಿತ ವಿಷಯದ ಒಂದು "ಕನ್ನಡ" ಪುಸ್ತಕವನ್ನು ಹೊರತರಲು ಕ್ರಮವಹಿಸುವುದು.
7. ತುಮಕೂರು ವಿಶ್ವವಿದ್ಯಾನಿಲಯದ ಅಂತರ್ಜಾಲ (ವೆಬ್‌ಸೈಟ್) ಮತ್ತು ಅದರಲ್ಲಿನ ಮಾಹಿತಿಗಳನ್ನು ಕನ್ನಡದಲ್ಲಿ ಸಿದ್ಧಪಡಿಸುವುದು.
8. ಉಲ್ಲೇಖ (04)ರನ್ವಯ ಕನ್ನಡ ಅನುಷ್ಠಾನ ಕುರಿತು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಘಟಕ ಸ್ಥಾಪಿಸಲಾಗಿದ್ದು, ಸದರಿ ಘಟಕಕ್ಕೆ ಶ್ರೀ. ಬಿ. ಕರಿಯಣ್ಣ ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು ಇವರನ್ನು ಸಂಯೋಜಕರನ್ನಾಗಿ ನೇಮಿಸಲಾಗಿದ್ದು, ತಮ್ಮ ಕಚೇರಿಗಳಲ್ಲಿ ಮತ್ತು ವಿಭಾಗಗಳಲ್ಲಿ ಕನ್ನಡ ಅನುಷ್ಠಾನ ಕುರಿತು ಕಾರ್ಯಗತಗೊಳಿಸಿರುವ ಮಾಹಿತಿಯನ್ನು ಸದರಿಯವರಿಗೆ ಸಲ್ಲಿಸತಕ್ಕದ್ದು.

ಮುಂದುವರೆದಿದೆ.......

9. ವಿಶ್ವವಿದ್ಯಾನಿಲಯದ ಕನ್ನಡ ಘಟಕದಿಂದ ಪ್ರತೀ ಮಾಹೆಯ 5ನೇ ತಾರೀಖಿನಂದು ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅನುಷ್ಠಾನ ಮತ್ತು ಕನ್ನಡ ಅಭಿವೃದ್ಧಿಯ ಬಗ್ಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಮಾಹಿತಿಗಳನ್ನು ಸಲ್ಲಿಸಬೇಕಾಗಿರುವುದರಿಂದ ತಮ್ಮ ಕಚೇರಿಯ ಮತ್ತು ವಿಭಾಗಗಳ ಮಾಹಿತಿಯನ್ನು ಶ್ರೀ. ಬಿ. ಕರಿಯಣ್ಣ, ಸಂಯೋಜಕರು, ಕನ್ನಡ ಘಟಕ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರಿಗೆ ಸಲ್ಲಿಸುವುದು.

ಆದೇಶದ ಮೇರೆಗೆ,

ಉಪಕುಲಸಚಿವರು

ಅಭಿವೃದ್ಧಿ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

1. ಕುಲಸಚಿವರು (ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಕಾರ್ಯಾಪಾಲಕ ಅಭಿಯಂತರರು, ಅಭಿಯಂತರರ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ,ತುಮಕೂರು.
4. ನಿರ್ದೇಶಕರು, ಪ್ರಸಾರಾಂಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಎಲ್ಲಾ ವಿಭಾಗಗಳ ಅಧ್ಯಕ್ಷರು/ಸಂಯೋಜಕರು, ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
6. ಸಂಯೋಜಕರು, ಜ್ಞಾನಸಿರಿ ಕ್ಯಾಂಪಸ್ ಬಿದರಕಟ್ಟೆ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
7. ಸಂಯೋಜಕರು, ಶಿರಾ ಪಿ.ಜಿ ಸೆಂಟರ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
8. ಸಂಯೋಜಕರು, ತಿಪಟೂರು ಪಿ.ಜಿ ಸೆಂಟರ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
9. ನಿರ್ದೇಶಕರು ವಿದ್ಯಾರ್ಥಿಕ್ಷೇಮಾಭಿವೃದ್ಧಿ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
10. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಘಟಕ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ ತುಮಕೂರು.
11. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
12. ನಿರ್ದೇಶಕರು, ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
13. ಗ್ರಂಥಪಾಲಕರು, ವಿ.ವಿ. ಗ್ರಂಥಾಲಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
14. ಎಲ್ಲಾ ವಿಭಾಗಗಳ ಉಪಕುಲಸಚಿವರು, ಅಭಿವೃದ್ಧಿ ವಿಭಾಗ/ಸಾಮಾನ್ಯ ಮತ್ತು ಖರೀದಿ ಕೋಶ/ಸಿಬ್ಬಂದಿ ವಿಭಾಗ/ಶೈಕ್ಷಣಿಕ ವಿಭಾಗ/ಸಿಂಡಿಕೇಟ್ ವಿಭಾಗ/ ಕಾನೂನು ಕೋಶ/ಪರೀಕ್ಷಾಂಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
15. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
16. ಇ–ಆಫೀಸ್ ನೋಡಲ್ ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
17. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
18. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪ್ರತಿ:-

1. ಶ್ರೀ. ಬಿ. ಕರಿಯಣ್ಣ, ಸಂಯೋಜಕರು, ಕನ್ನಡ ಘಟಕ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
2. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು–ಸದರಿ ಸುತ್ತೋಲೆಯನ್ನು ಸಂಬಂಧಿಸಿದವರಿಗೆ ಇ-ಮೇಲ್ ಮುಖಾಂತರ ಕಳುಹಿಸುವುದು ಮತ್ತು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
4. ಕಚೇರಿ ಪ್ರತಿ